# ಜಾನಪದ ಸಾಹಿತ್ಯದ ಶ್ರೀಮಂತಿಕೆ

**ನೇತ್ರಾವತಿ ಗಬ್ಬೂರ**

ಸಹಾಯಕ ಕನ್ನಡ ಪ್ರಾಧ್ಯಾಪಕರು, ಕೆ.ಎಲ್.ಇ ಸಂಸ್ಥೆಯ ಜೆ.ಜಿ. ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ.

DOI: https://doi.org/10.5281/zenodo.17258014

## ABSTRACT:

ಈ ಲೇಖನವು ಕನ್ನಡದ ಜಾನಪದ ಸಾಹಿತ್ಯದ ಶ್ರೀಮಂತಿಕೆಯನ್ನು ವಿಶ್ಲೇಷಿಸುತ್ತದೆ. ಮೌಖಿಕ ಪರಂಪರೆಯಿಂದ ಹರಿದು ಬಂದ ಜನಪದ ಸಾಹಿತ್ಯವು ಗ್ರಾಮೀಣ ಜನರ ಭಾವನೆಗಳು, ಸಂಪ್ರದಾಯಗಳು, ನಂಬಿಕೆಗಳು ಮತ್ತು ಜೀವನ ಮೌಲ್ಯಗಳನ್ನು ಪ್ರತಿಬಿಂಬಿಸುವ ಶಕ್ತಿಯುತ ಮಾಧ್ಯಮವಾಗಿದೆ. ತ್ರಿಪದಿಗಳು, ಗಾದೆಗಳು, ಗರತಿಯ ಹಾಡುಗಳು, ಭಜನೆಗಳು, ಕುಣಿತಗಳು ಮುಂತಾದ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ವ್ಯಕ್ತವಾಗಿದೆ. ಇವುಗಳಲ್ಲಿ ತಾಯಿ–ತವರು, ಭೂಮಿತಾಯಿ, ದೇವತೆಗಳು, ಪ್ರೀತಿ, ಭಕ್ತಿ, ಸಹೋದರತೆ, ಸಹಬಾಳ್ವೆ ಮತ್ತು ದುಡಿಮೆಯ ಮೌಲ್ಯಗಳು ವ್ಯಕ್ತವಾಗಿವೆ. ಜನಪದ ಸಾಹಿತ್ಯವು ಕೇವಲ ಮನರಂಜನೆ ಮಾತ್ರವಲ್ಲ, ಜೀವನದ ದರ್ಶನ, ನೈತಿಕ ಬೋಧನೆ ಮತ್ತು ಸಾಂಸ್ಕೃತಿಕ ಸಂರಕ್ಷಣೆಯ ಪ್ರಮುಖ ಸಾಧನವಾಗಿದೆ. ಆಧುನಿಕ ಜಾಗತೀಕರಣದ ಯುಗದಲ್ಲೂ ಜನಪದ ಸಾಹಿತ್ಯದ ಮೌಲ್ಯಗಳು ಸಮಾಜಕ್ಕೆ ಪ್ರೇರಣೆಯಾಗಿ, ಹೊಸ ಪೀಳಿಗೆಗೆ ಮಾರ್ಗದರ್ಶಕವಾಗಿವೆ. ಹೀಗಾಗಿ, ಜಾನಪದ ಸಾಹಿತ್ಯವು ಕನ್ನಡ ಸಂಸ್ಕೃತಿಯ ತಾಯಿ ಬೇರಾಗಿದ್ದು, ಹಳೆಬೇರು–ಹೊಸ ಚಿಗುರುಗಳನ್ನು ಸೇರ್ಪಡೆಗೊಳಿಸುವ ಶ್ರೀಮಂತ ಪರಂಪರೆಯ ಪ್ರತೀಕವಾಗಿದೆ.

## KEYWORDS:

ಜಾನಪದ ಸಾಹಿತ್ಯ, ತ್ರಿಪದಿ, ಗರತಿಯ ಹಾಡು, ಭಕ್ತಿ, ದುಡಿಮೆ, ಸಹಬಾಳ್ವೆ, ಗ್ರಾಮೀಣ ಸಂಸ್ಕೃತಿ.

**"ಮುತ್ತು ಮಾಣಿಕ ಬೇಡ, ಮತ್ತೆ ಸಂಪದ ಬೇಡ**
**ಸುತ್ತಲೂ ಕೋಟೆಯ ವೈಭವ ಬೇಡಾ ॥ ನನ್ನವ್ವ ॥**
**ಸುತ್ತೂಲು ಜನಪದದ ಹಾಡಿರಲಿ"**

**–ಜಾನಪದ ತ್ರಿಪದಿ**

ಎನ್ನುವ ತ್ರಿಪದಿ ಜಾನಪದ ಸಾಹಿತ್ಯದ ಶ್ರೇಷ್ಠತೆಯ ಜೊತೆಗೆ ಶ್ರೀಮಂತಿಕೆಯನ್ನು ಸೂಚಿಸುತ್ತದೆ. ಶ್ರೀಮಂತಿಕೆ ಎನ್ನುವ ಪದವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಜಾನಪದರ ಶ್ರೀಮಂತಿಕೆ ಮನುಷ್ಯನಿಗೆ ಮಾತ್ರವಲ್ಲಾ ಇಡೀ ಜೀವ ಸಂಕುಲದ ಪರವಾಗಿರುವುದನ್ನು ಕಾಣಬಹುದು. ಜನಪದರು ಪ್ರಾಣಿ–ಪಕ್ಷಿಗಳನ್ನು ತಮ್ಮ ಕುಟುಂಬದ ಸದಸ್ಯರಾಗಿ ಸ್ವೀಕರಿಸಿರುವ ಭಾವಚಿತ್ರಗಳು ಇವತ್ತೀನ ಸಂದರ್ಭದಲ್ಲಿ ಕಾಣಸಿಗುವುದಿಲ್ಲಾ. ಅಂದಿನ ಜನಪದರ ಬದುಕು ಸಂಸ್ಕೃತಿ, ಗೌರವಾದರಗಳ ಜೊತೆಗೆ ಜೀವನ ಮೌಲ್ಯಗಳಲ್ಲಿ ಬದುಕನ್ನು ಶ್ರೀಮಂತವಾಗಿರಿಸಿಕೊಂಡವರು. ಆದ್ದರಿಂದ ಇವತ್ತಿನ ಯಾಂತ್ರೀಕರಣದ ಸಂದರ್ಭದಲ್ಲಿ ಜಾನಪದ ಸಾಹಿತ್ಯದ ಶ್ರೀಮಂತಿಕೆಯನ್ನು ಅರಿತುಕೊಳ್ಳುವುದು, ಅವರ ಸಾಹಿತ್ಯದಲ್ಲಿನ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಪ್ರಸ್ತುತವೆನಿಸುತ್ತದೆ.

ಕನ್ನಡ ಸಾಹಿತ್ಯದ ತಾಯಿ ಬೇರು ಜನಪದ ಸಾಹಿತ್ಯ. ಜನರ ಬಾಯಿಂದ ಬಾಯಿಗೆ ಹರಿದು ಬಂದಿರುವ ಜನಪದ ಸಾಹಿತ್ಯವು, ಸರಳ, ಸಹೃದಯ ಸ್ಪರ್ಶಿಯಾದ ಜನಸಾಮಾನ್ಯರ ಭಾವನೆಗಳನ್ನು ಪ್ರತಿಬಿಂಬಿಸುವ ಶಕ್ತಿಯುತ ಸಂವಹನ ಮಾಧ್ಯಮವಾಗಿದೆ. ಓದು, ಬರವಣಿಗೆಗಳಿಲ್ಲದ ಅಂದಿನ ಕಾಲ ಘಟ್ಟದಲ್ಲಿ ಮೌಖಿಕ ಪರಂಪರೆಯ ಮೂಲಕ ಒಂದು ಜನಾಂಗದ ಆಚಾರ–ವಿಚಾರ, ನಂಬಿಕೆ, ಸಂಪ್ರದಾಯಗಳನ್ನು ಗರ್ಭೀಕರಿಸಿಕೊಂಡು ಜನ ಸಾಮಾನ್ಯರ ಸಂಸ್ಕೃತಿಯನ್ನು ರೂಪಿಸಿದ ಸಂಪತ್ತಾಗಿದೆ. ಇದು ಮನುಕುಲದ ಉದಯೋದಯದೊಂದಿಗೆ ಸಮಾಜದ ಮೂಲಭೂತ ಜೀವನದ ಅಸ್ತಿತ್ವವನ್ನು, ಬದುಕಿನ ಅಸ್ಮಿತೆಯನ್ನು ತಿಳಿಸುವಂತಹ ಸಾಹಿತ್ಯ ಪ್ರಕಾರವೆನಾದರೂ ಇದ್ದರೆ ಅದು ಜನಪದ ಸಾಹಿತ್ಯವಾಗಿದೆ. ಯಾವುದೇ ಕಾಲದ ಸಾಹಿತ್ಯವನ್ನು ಗಮನಿಸಿದರೆ ಆಯಾ ಕಾಲದಲ್ಲಿನ ಸಾಹಿತ್ಯ ಅಂದಿನ ಸಮಾಜ ಜೀವನದ ಜೀವಂತಿಕೆಯ ಸಾಕ್ಷಿಪ್ರಜ್ಞೆ. ಇದು ಜನರ ಜೀವನ ಶೈಲಿ, ಬದುಕಿನ ವಿಧಾನ, ಆಚಾರ–ವಿಚಾರ, ಕಾಲ ಪರಿಸ್ಥಿತಿ ಮತ್ತು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಜನಪದ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯ ಎರಡು ವಿಭಿನ್ನ ಸಾಹಿತ್ಯವಾದರೂ ಇಂದಿನ ನಮ್ಮ ಸಮಾಜದ ಸಾಂಸ್ಕೃತೀಕತೆಯ ಅವಿಭಾಜ್ಯ ಅಂಗವಾಗಿದೆ. ಜನಪದ ಸಾಹಿತ್ಯದಲ್ಲಿ 'ಗರತಿಯ ಹಾಡುಗಳು' ಜನರ ಮನಸ್ಸಿನಲ್ಲಿ ನೆಲೆನಿಂತಿವೆ. ಆದ್ದರಿಂದ ಆಯ್ದ ತ್ರಿಪದಿಗಳಲ್ಲಿನ ವಿಶೇಷವಾಗಿ ಜನಪದ ಸಾಹಿತ್ಯದ ಶ್ರೀಮಂತಿಕೆಯ ಶ್ರೇಷ್ಠತೆಯ ಕುರಿತಾದ ಅಧ್ಯಯನ ಮಾಡುವುದು ಈ ಲೇಖನದ ಮೂಲ ಉದ್ದೇಶವಾಗಿದೆ.

**ಜಾನಪದ ಸಾಹಿತ್ಯದ ವೈಶಿಷ್ಟ್ಯತೆ:**

ಜನಪದ ಸಾಹಿತ್ಯದ ವೈಶಿಷ್ಟ್ಯತೆ ಎಂದರೆ ಅದು ಮೌಖಿಕ ಪರಂಪರೆಯಾಗಿದ್ದು, ಅಕ್ಷರ ಲೋಕದಿಂದ ಅಪರಿಚಿತವಾದರೂ ತಮ್ಮ ಸೃಜನಶೀಲತೆಯಿಂದ ಇಂದಿಗೂ ಅಕ್ಷರಸ್ಥ ಸಮಾಜಕ್ಕೆ ಮಾದರಿಯಾಗಿವೆ. ಅನಕ್ಷರಸ್ಥರಾದರೂ ಅವರ ಸಾಹಿತ್ಯದಲ್ಲಿ ಕಥೆ, ಗಾದೆ, ಒಗಟು, ಸುಗ್ಗಿ ಹಾಡುಗಳು, ಗರತಿಯ ಹಾಡು, ಕುಟ್ಟುವ ಪದಗಳು, ಬೀಸುವ ಪದಗಳು, ಸೋಬಾನೆ ಪದಗಳು, ಒಡಪು, ಡೊಳ್ಳು ಕುಣಿತ, ಬೀಸು ಕುಣಿತ, ಭಜನೆ, ಕೋಲಾಟ, ಹೀಗೆ ಸಾಹಿತ್ಯ ಪ್ರಕಾರಗಳ ಪಟ್ಟಿ ಬೆಳೆಯುತ್ತಲೆ ಹೋಗುತ್ತದೆ. ಇಲ್ಲಿ ಒಂದೊಂದು ಸಾಹಿತ್ಯ ಪ್ರಕಾರವು ಒಂದೊಂದು ವೈಶಿಷ್ಟ್ಯತೆ ಮತ್ತು ವೈವಿಧ್ಯತೆಯಿಂದ ಕೂಡಿದೆ. ಇಲ್ಲಿನ ಸಾಹಿತ್ಯವು ಮಾನವ ಬದುಕಿನ ಎಲ್ಲಾ ಮಜಲುಗಳಲ್ಲಿನ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದಲೇ ಇಲ್ಲಿ ಜನ ಎಂದರೆ ಜನಸಾಮಾನ್ಯರು, ಹಾಗೂ ಪದ ಎಂದರೆ ಮಾತು, ಗೀತೆ, ಕಥೆ, ಅಭಿವ್ಯಕ್ತಿ ಎಂಬ ಅರ್ಥವನ್ನು ಹೊಂದಿದೆ. ಇಲ್ಲಿ ಬದುಕಿನ ಅನುಭವಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಒಟ್ಟಾರೆಯಾಗಿ ಜನ ಸಾಮಾನ್ಯರ ಜೀವನದ ದೇಶಿ ಸಂಸ್ಕೃತಿಯ ಶ್ರೀಮಂತಿಕೆಯನ್ನು ಪ್ರತಿನಿಧಿಸುವಲ್ಲಿ ಮಹತ್ವದ್ದಾಗಿದೆ. ಜನಪದ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯದ ಕುರಿತು ಇವತ್ತಿನ ಸ್ಪರ್ಧಾತ್ಮಕ ದಿನಮಾನದಲ್ಲಿ ಅಭ್ಯಸಿಸುವುದೆಂದರೆ ಮನುಷ್ಯ ಸಂಕುಲದ ಎರಡು ಪ್ರಮುಖ ಘಟ್ಟಗಳ ಸಂಸ್ಕೃತಿಯಲ್ಲಿನ ವೈವಿಧ್ಯತೆಯ ಕುರಿತು ಅಭ್ಯಸಿಸುವುದಾಗಿದೆ. ಇಲ್ಲಿ ಜಾನಪದ ಸಾಹಿತ್ಯದ ಶ್ರೇಷ್ಠತೆಯ ಮೌಲ್ಯಗಳ ಕುರಿತು ವಿವೇಚಿಸುವುದಾದರೆ ಅದು ಅಂದಿನ ತಲೆಮಾರಿನ ಜೊತೆಗೆ ಇಂದಿನ ತಲೆಮಾರಿನ ಬೆಸುಗೆಯಾಗಿದೆ. ಆದರೆ ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿ ಇಂದಿನ ಯುವಜನತೆಯು ಜಾನಪದ ಸಾಹಿತ್ಯದಲ್ಲಿರುವ ಜ್ಞಾನಪ್ರಪಂಚದ ಶ್ರೀಮಂತಿಕೆಯನ್ನು ಅರಿತುಕೊಳ್ಳದೆ ಇರುವುದು ನಮ್ಮ ದೇಶೀ ಸಂಸ್ಕೃತಿಯ ಪರಂಪರೆಗೆ ಬಹುದೊಡ್ಡ ಮಾರಕವಾಗಿದೆ. ಅಲ್ಲದೆ ಜನಪದ ಸಾಹಿತ್ಯ ಕನ್ನಡ ಸಾಹಿತ್ಯ ಲೋಕದಲ್ಲಿ ತಾಯಿ ಬೇರಿನ ಸಂಬಂಧವನ್ನು ಹೊಂದಿದ್ದು ಇದು ನಮ್ಮ ನಾಡಿನ ಸಾಂಸ್ಕೃತಿಕ ಪ್ರತೀಕವಾಗಿದೆ.

**ತ್ರಿಪದಿಗಳಲ್ಲಿ ಜನಪದ ಸಾಹಿತ್ಯದ ಶ್ರೀಮಂತಿಕೆ:**

ತ್ರಿಪದಿಗಳು ಎಂದರೆ ಮೂರು ಸಾಲಿನ ಪದ್ಯ ಎನ್ನುವುದರ ಜೊತೆಗೆ, ಇವು ಜನರಿಗೆ ಸುಲಭವಾಗಿ ಅರ್ಥವಾಗುವಂತಿದ್ದು, ಜನಸಾಮಾನ್ಯರ ಜೀವನಕ್ಕೆ ಸಂಬಂಧಿಸಿರುವ ಜನಪದರ ಒಟ್ಟು ಬದುಕಿನ ಮೊತ್ತವಾಗಿದೆ. ಪ್ರಮುಖವಾಗಿ ತಾಯಿ–ತವರು, ತಾಯಿ–ಮಕ್ಕಳು, ಗಂಡ–ಹೆಂಡತಿ, ಅಣ್ಣ–ತಮ್ಮ, ಅಕ್ಕ–ತಂಗಿ, ಹೀಗೆ ಮಾನವ ಸಂಕುಲದ ಆಚರಣೆಗಳೊಂದಿಗೆ ಎಲ್ಲಾ ಸಂಬಂಧಗಳ ಜೊತೆಗೆ ಸವತಿ ಮತ್ಸರಗಳನ್ನು ಸಹ ಅತ್ಯಂತ ಸಹೃದಯತೆಯಿಂದಲೇ ಹಾಡಿ ಹರಸಿರುವ ಏಕೈಕ

ಸಾಹಿತ್ಯ ಪ್ರಕಾರವೆಂದರೆ ಅದು ಜನಪದ ಸಾಹಿತ್ಯದ ತ್ರಿಪದಿ ಪ್ರಕಾರವಾಗಿದೆ ಎಂದರೆ ತಪ್ಪಾಗಲಾರದು.

**ಭೂಮಿತಾಯಿಯನ್ನು ಸ್ಮರಿಸುವಲ್ಲಿ ...**
**ಏಳುತಲೆ ನಾನೆದ್ದು ಯಾರ್‍ಯಾರ ನೆನೆಯಲ್ಲಿ**
**ಎಳ್ಳು ಜೀರಿಗೆ ಬೆಳೆಯೊಳಾ ॥ ಭೂಮಿತಾಯಿ ॥**
**ಎದ್ದೊಂದು ಗಳಿಗೆ ನೆನೆದೆನೆ**

ಎಲ್ಲ ದೇವರಿಗಿಂತ ಭೂಮಿತಾಯಿ ರೈತನಿಗೆ ಆರಾಧ್ಯ ದೈವ. ಭೂಮಿಯು ಎಲ್ಲಾ ಜೀವಿಗಳ ಅಸ್ತಿತ್ವದ ನೆಲದಾಧಾರ. ಎಲ್ಲರಿಗೂ ಅನ್ನ ನೀಡುವ ಭೂಮಿಯನ್ನು ಆರಾಧಿಸುವುದರೊಂದಿಗೆ, ಪೂಜಿಸುವ ಮಣ್ಣಿನ ಸಂಸ್ಕೃತಿಯನ್ನು ತಿಳಿಸುತ್ತದೆ. ಎದ್ದು ಕೂಡಲೆ ಭೂಮಿತಾಯಿಯನ್ನು ಜ್ಞಾಪಿಸಿಕೊಳ್ಳುವ ಶ್ರಮಜೀವಿಯು ಈ ಮಣ್ಣಿನ ಋಣವನ್ನು ಶ್ರಮ ಸಂಸ್ಕೃತಿಯ ದುಡಿಮೆಯನ್ನು ವ್ಯಕ್ತಪಡಿಸುವ ರೀತಿ ಅನನ್ಯವಾದದ್ದಾಗಿದೆ. ಪ್ರಕೃತಿಯ ಜೊತೆಗೆ ತಾಯಿ-ತವರಿಗೂ ತ್ರಿಪದಿಗಳಲ್ಲಿ ಅಗ್ರಮಾನ್ಯಸ್ಥಾನವಿದೆ.

ಭಕ್ತಿ ಪರವಶತೆ...

**ಕರುಣ ಬಂದರೆ ಕಾಯೋ ಮರಣ ಬಂದರೆ ಒಯ್ಯೋ**
**ಕರುಣಿ ಕಲ್ಯಾಣ ಬಸವಣ್ಣ ॥ಕಾಶಿಲಿಂಗ॥**
**ಕಡೆತನಕ ಕಾಯೋ ಅಭಿಮಾನ**

ಈ ತ್ರಿಪದಿಯಲ್ಲಿ ಬದುಕು ಬಂದಂತೆ ಸ್ವೀಕರಿಸುವ ಮತ್ತು ತಮ್ಮನ್ನ ತಮ್ಮ ಬದುಕನ್ನ ದೈವಕ್ಕೆ ಸಮರ್ಪಿಸುವ ರೀತಿ ಅರ್ಥಗರ್ಭಿತವಾದದ್ದು, ಯಾವಾಗ ಬೇಕಾದರು ಅಂತ್ಯವಾಗುವ, ಕ್ಷಣಿಕ ನಶ್ವರ ಬದುಕನ್ನು ಲೇಕ್ಕಿಸದೆ ಕರುಣೆ ಬಂದರೆ ಕಾಯಿ ಇಲ್ಲವೆ ಮರಣ ಬಂದರೆ ನಿನ್ನಲ್ಲಿ ನಮ್ಮನ್ನ ಲೀನವಾಗಿಸುವ ದೈವ ಆತ, ಕರುಣಿ ಕಾಶಿಲಿಂಗ ಎಂದು ಬೇಡಿಕೊಳ್ಳುವ ಮತ್ತು ಇರುವಷ್ಟು ದಿನಾ ಬದುಕನ್ನ ಗೌರವಿಸುವುದರೊಂದಿಗೆ ಸಾರ್ಥಕತೆಯನ್ನು ಹೊಂದುವ ಅವರ ಜೀವನ ಅಭಿಮಾನ ಇಂದಿನ ಯುವಜನತೆಗೆ ಪ್ರೇರಕವಾದದ್ದು.

**ಶಿವ ಶಿವ ಎಂದರ ಸಿಡಿಲೆಲ್ಲಾ ಬಯಲಾಗಿ**
**ಕಲ್ಲು ಬಂದೆರಗಿ ಕಡೆಗಾಗಿ ॥ ಎಲೆಮನವೆ ॥**
**ಶಿವನೆಂಬ ಶಬ್ದವ ಬಿಡಬ್ಯಾಡ**

ಇದು ಜನಪದರ ಭಕ್ತಿ ಪರವಶತೆಯನ್ನು ತಿಳಿಸುವ ತ್ರಿಪದಿಯಾಗಿದೆ. ಶಿವ ಶಿವ ಎಂದರೆ ಸಿಡಿಲೆಲ್ಲಾ ಬಯಲಾಗಿ ಅರ್ಥಾತ್ ಎಂತಹ ಕಷ್ಟಗಳು ಬಂದರು ಶಿವನಾಮ ಸ್ಮರಣೆಯಿಂದ ಹೂವಿನಷ್ಟೆ ಹಗುರವಾಗಿ ಶಿವನಾಮಸ್ಮರಣೆಯಿಂದ

ಕಳೆಯುತ್ತದೆ ಎಂಬ ಅಚಲವಾದ ನಂಬಿಕೆ. ಮತ್ತು ಬದುಕಿನ ಕೊನೆಯವರೆಗೂ ಶಿವನಾಮ ಸ್ಮರಣೆ, ಭಯ ಭಕ್ತಿಯ ಉತ್ಕಟತೆಯನ್ನು ಕಾಣಬಹುದು. ಇಲ್ಲಿ ಆಡಂಬರದ ಪೂಜೆ, ಪುನಸ್ಕಾರಗಳಿಲ್ಲ, ಅವರ ಭಕ್ತಿ ಶಿವನೆಂಬ ಶಬ್ದ ಅಂದರೆ ಶಿವನಾಮ ನೆನೆಯುತ್ತಲೆ ಬಂದದ್ದನ್ನು ಸ್ವೀಕರಿಸುವ ಸರಳವಾದ ದೇವತಾ ಆರಾಧನೆ ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಹಾಗೇ ತಾಯಿ ತವರನ್ನು ನೆನೆಸುವ ಗರತಿಯರ ಮಾತೃ ಪ್ರೇಮ ಮನಮುಟ್ಟುವಂತದ್ದು...

**ಬ್ಯಾಸಗಿ ದಿವಸಕ್ಕ ಬೇವಿನ ಮರತಂಪು**
**ಭೀಮರತಿಯಂಬ ಹೊಳಿತಂಪು ॥ ಹಡೆದವ್ವ॥**
**ನೀ ತಂಪ ನನ್ನ ತವರಿಗೆ.**

ತಾಯಿ–ತವರು ಎಂಬುದು ಹೆಣ್ಣಿನ ಜೀವನಕ್ಕೆ ಅಮೂಲ್ಯವಾದ ಕೊಡುಗೆ. ಇವತ್ತೀನ ದಿನಮಾನದಲ್ಲಿ ಪ್ರತಿಯೊಬ್ಬರಿಗೂ ತವರೆಂಬ ತಾಯಿ ಮಡಿಲು ಬೇಕೆಂಬ ಬಯಕೆ ಇದೆ. ಆದರೆ ಜನಪದರು ನಿರ್ಮಿಸಿದ ತಾಯಂಬ ಮಮತೆಗೆ ಸಾಟಿ ಇಲ್ಲ. ತಾಯಿಯ ಮಡಿಲು ಜವಾಬ್ದಾರಿಯ ಕಡಲಾಗಿದೆ. ತನ್ನ ಮಗಳನ್ನ ಅತ್ಯಂತ ಆದರದಿಂದ, ಪ್ರೀತಿ, ವಾತ್ಸಲ್ಯದಿಂದ ಸಾಕಿದ ಮಗಳು ಗಂಡನ ಮನೆಯಲ್ಲಿನ ಕರ್ತವ್ಯಕ್ಕೆ ಅಣಿಯಾಗುವ ಸಂದರ್ಭದಲ್ಲಿ ಮತ್ತು ಹೆಣ್ತನದ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಹೆಣ್ಣಿಗೆ ತಾಯಿ–ತವರು ನೆನಪಾಗುವಿಕೆಯ ಮಹತ್ವ ಈ ತ್ರಿಪದಿಯಲ್ಲಿ ವಿದಿತವಾಗುತ್ತದೆ.

**ತಂದಿಯ ನೆನೆದರ ತಂಗಳು ಬಿಸಿಯಾತು**
**ಗಂಗಾದೇವಿ ನನ್ನ ಹಡೆದವ್ವ ॥ನೆನೆದರ॥**
**ಮಾಸಿದ ತಲೆಯು ಮಡಿಯಾತು.**

ತಾಯಿ–ತಂದೆಯ ಮಹತ್ವವನ್ನು ಈ ತ್ರಿಪದಿ ತಿಳಿಸುತ್ತದೆ. ಎಂತಹ ಸಂದರ್ಭದಲ್ಲಿಯು ತನ್ನ ಹೆತ್ತ ತಾಯಿ–ತಂದೆಯನ್ನು ಸ್ಮರಿಸಿದರೆ, ಕಷ್ಟಗಳು ಕರಗಿ ಸಾಂತ್ವಾನ ಸಿಗುವುದಲ್ಲದೆ. ಅವರ ಹರಕೆ, ಮಾರ್ಗದರ್ಶನವು ಜೀವನದ್ದುದ್ದಕ್ಕೂ ಧೈರ್ಯದ ಸಂಕೇತವಾಗಿ ಮಾಸಿದ ತಲೆಯು ಮಡಿಯಾತು ಎಂಬಲ್ಲಿ ಕೌಟುಂಬಿಕತೆ ಬಾಂದವ್ಯ ವಿದಿತವಾಗುತ್ತದೆ.

**ಮಂದಿ ಮಕ್ಕಳೊಳಗೆ ಛಂದಾಗ್ಹೊಂದಿರಬೇಕು**
**ನಂದಿಯ ಶಿವನ ದಯದಿಂದ ॥ ಹೋಗಾಗ ॥**
**ಮಂದಿ ಬಾಯಾಗ ಇರಬೇಕ.**

ಮಂದಿ ಮಕ್ಕಳೊಳಗೆ ಛಂದಾಗ್ಹೊಂದಿರಬೇಕು ಎಂಬುದು ಎಲ್ಲರೊಂದಿಗೂ ಹೊಂದಿಕೊಂಡು ಹೋಗಬೇಕೆಂಬುದಾಗಿದೆ. ಇಲ್ಲಿ ಮಂದಿ ಮಕ್ಕಳು ಎಂದರೆ ಹಿರಿಯರು–ಕಿರಿಯರು, ಸಮಾಜದಲ್ಲಿನ ಸಹೃದಯಿಗಳು ಎಂದರ್ಥ. ಛಂದವೆಂಬುದು ಸುಂದರ ಎನ್ನುವುದರ ಜೊತೆಗೆ ಅಂತರಂಗ ಮತ್ತು ಬಹಿರಂಗದ ವ್ಯಕ್ತಿತ್ವವನ್ನು

ಸುಂದರವಾಗಿಸಿಕೊಳ್ಳುವಿಕೆಯಾಗಿದೆ. ಅರ್ಥಾತ್ ಎಲ್ಲರ ಕಡೆಯು ಹೌದೆನಿಸಿಕೊಳ್ಳುವುದಾಗಿದೆ. ಹೀಗೆ ಪರಸ್ಪರ ಒಬ್ಬರಿಗೊಬ್ಬರು ನೆರೆಹೊರೆಯವರ ಜೊತೆ ಸಹಾಯ, ಸಹಕಾರದಿಂದ ಬದುಕುವ ಈ ತ್ರಿಪದಿ ಸಹಬಾಳ್ವೆಯ ಸಂಕೇತದಂತಿದೆ. ಒಟ್ಟಾರೆಯಾಗಿ ಜನಪದರ ಭಾವನೆಗಳಲ್ಲಿ ಬದುಕು ನಶ್ವರವಾದದ್ದು ನಮ್ಮ ಬದುಕಿನಲ್ಲಿ ನಾವು ಎಲ್ಲರಲ್ಲೂ ಒಂದಾಗಿ ಬಾಳಬೇಕು, ಸಾವಿನ ನಂತರವು ನಾವು ಮಾಡುವ ಸತ್ಕಾರ್ಯಗಳಿಂದ ಜೀವಂತವಾಗಿರಬೇಕೆಂಬ ಸಂಸ್ಕೃತಿಯನ್ನು ಕಾಣಬಹುದು. ಅದರಂತೆಯೇ

**ಹುಟ್ಟಾಗ ತರಲಿಲ್ಲ ಹೋಗಾಗ ಒಯ್ಯುದಿಲ್ಲ**
**ಸುಟ್ಟು ಸುಟ್ಟು ಸುಣ್ಣದ್ಹರಳಾಯ್ತು ||ದೇಹವು||**
**ಕಷ್ಟವ ಬಿಡಿಸೋ ಮಹಾದೇವಾ.**

ಜನಪದರು ಮೂಲತಃ ದುಡಿಮೇಯ ಉಪಾಸಕರು. ದುಡಿದು ಉಣ್ಣುವುದು ಸಂಸ್ಕೃತಿ ದುಡಿಯದೇ ಉಣ್ಣುವುದು ವಿಕೃತಿ ಎಂದು ಭಾವಿಸಿದ ಜನಪದರು ದುಡಿದು ದುಡಿದು ಸುಣ್ಣದ ಕಲ್ಲಿನಂತೆ ತಮ್ಮನ್ನು ತಾವು ದುಡಿಮೆಗಾಗಿ ತೊಡಗಿಸಿಕೊಂಡವರು. ಅವರು ಬದುಕೆಂದರೆ ಅದೊಂದು ದುಡಿಮೆ ಮತ್ತು ತಾಳ್ಮೆ. ಹುಟ್ಟಾಗ ತರಲಿಲ್ಲ ಹೋಗಾಗ ಒಯ್ಯುದಿಲ್ಲ ಎಂಬ ವಿಚಾರಧಾರೇ ಹುಟ್ಟು ಮತ್ತು ಸಾವಿನ ನಡುವೆ ಬರುವ ಕಷ್ಟಗಳನ್ನು ಪರಿಹರಿಸು ಎಂದು ಮೋರೆಹೂಗುವ ಅವರ ಆಚಾರ ವಿಚಾರಗಳು ಸರಳವಾದವು ಆದರೆ ಅವರ ಅಭಿವ್ಯಕ್ತಿ ಮಾತ್ರ ಅರ್ಥಪೂರ್ಣವಾದದ್ದು. ಅಂತೆಯೆ ಸಹೋದರತೆಯಲ್ಲಿ

**ಹೆಣ್ಣಿನ ಜನುಮಕ್ಕ ಅಣ್ಣತಮ್ಮರು ಬೇಕು**
**ಬೇನ್ನ ಕಟ್ಟುವರು ಸಭೆಯೊಳಗೆ ||ಸಾವಿರ||**
**ಹೊನ್ನ ಕಟ್ಟುವರು ಉಡಿಯೂಳಗೆ**

ಎಂಬ ತ್ರಿಪದಿಯು ಅಣ್ಣ–ತಂಗಿ, ಅಕ್ಕ–ತಮ್ಮರ ನಡುವಿನ ಬಾಂದವ್ಯವನ್ನು ಸಾರುತ್ತದೆ. ಹೆಣ್ಣಾದವಳಿಗೆ ಅಣ್ಣ ತಮ್ಮರಿದ್ದರೆ ಅವಳಿಗೆ ಒಂದಾನೆ ಶಕ್ತಿ ಬಂದಂತಾಗುತ್ತದೆ. ಅವಳನ್ನು ತವರು ಮನೆಗೆ ಕರೆತರುವ, ಗಂಡನ ಮನೆಗೆ ಕಳಿಸುವ ಸಂರಕ್ಷಣೆ ಅಣ್ಣನದಾಗಿದೆ. ಇಂತಹದೇ ಅನೇಕ ಗುರುತರ ಜವಾಬ್ದಾರಿಗಳನ್ನು ಹೊತ್ತ ಅಣ್ಣಂದಿರು ಸದಾ ಅವಳ ಒಳಿತನ್ನು ಬಯಸುವಲ್ಲಿನ ಕಾಳಜಿ ಅಮೂಲ್ಯವಾದದ್ದು. ಇಂತಹ ವಾತ್ಸಲ್ಯ ಅಭಿಮಾನವು ಜನಪದರು ಸಂಬಂಧಗಳಿಗೆ ಕೊಡುವ ಶ್ರೇಷ್ಠತೆಯಲ್ಲಿ ಸಹೋದರತೆಯಲ್ಲಿನ ಜೀವನ ಪ್ರೀತಿ ಅನನ್ಯವಾದದ್ದು. ಜನಪದ ಸಾಹಿತ್ಯವು ಜೀವನ ಪ್ರೀತಿಯನ್ನು ಹೊಂದಿರುವ ಸಾಹಿತ್ಯವಾಗಿದೆ. ಸಿಹಿಯಂತೆಯೆ ಜೀವನದ ಕಹಿಗಳಿಗೂ ಸ್ಪಂದಿಸುವ ಅವರ ತ್ರಿಪದಿ

**ಭಾಗಾದಿ ಬಲಕಿರಲಿ ವೈರಿ ತಾ ಎಡಕಿರಲಿ**

ಛಾಡಿ ನಿನಮನಿಯ ಇದಿರಿರಲಿ ॥ ಬಲಭೀಮ ॥
ದೇವ ನನ ಮ್ಯಾಲ ದಯವಿರಲಿ

ಎನ್ನುವ ತ್ರಿಪದಿ ಅಂದಿನ ಸಮಾಜದಲ್ಲೂ ನಡೆಯುವ ವಿರಸ ಮತ್ತು ವೈರತ್ವವನ್ನು ತಿಳಿಸುತ್ತದೆ. ನಡೆದಂತೆ ನುಡಿಯುವ ಅವರ ನಾಲಿಗೆ ಸದಾ ಜಾಗೃತ. ಬಂಧುಗಳ ರೂಪದಲ್ಲಿರುವ ಹಿತಶತ್ರುಗಳು ಸುಂದರವಾದ ಬದುಕುನಲ್ಲಿ ವೈಮನಸ್ಥಿತಿಗಳನ್ನು ತಂದೊಡ್ಡಿ ಬದುಕನ್ನು ಇಲ್ಲವಾಗಿಸುವ, ಛಾಡಿ ಹೇಳುವ, ಜಗಳ ಕದನಗಳ ಹಚ್ಚುವ ಜನರ ಮಧ್ಯ ಬದುಕಬೇಕಾಗಿರುವುದರಿಂದ ದೇವ ನನ ಮ್ಯಾಲ ದಯವಿರಲಿ ಎಂದು ಪ್ರಾರ್ಥಿಸುತ್ತಾರೆ. ಇಲ್ಲಿ ತುಳಿದು ಬದುಕುವದಕ್ಕಿಂತ ತಿಳಿದು ಬದುಕುವ ಅವರ ಬದುಕು ಶ್ರೇಷ್ಠವಾದುದಾಗಿದೆ. ಗುಣ ನೋಡಿ ಗೆಳತನ ಮಾಡು ಎನ್ನುವ ಚಿಂತನಾಭಿವ್ಯಕ್ತಿ ವಿಶೇಷವಾದದ್ದು ಎಂದು ವಿದಿತವಾಗುತ್ತದೆ.

ಒಟ್ಟಾರೆಯಾಗಿ ಜನಪದ ಸಾಹಿತ್ಯವು 'ವಸುದೈವ ಕುಟುಂಬಕಂ' ಎನ್ನುವಂತೆ ಸಾರ್ಥಕ ಜೀವನ ದರ್ಶನದ ಉತ್ಕೃಷ್ಠ ಅಭಿವ್ಯಕ್ತಿ. ಗ್ರಾಮೀಣ ಜೀವನದ ಕೈಗನ್ನಡಿಯಾಗಿದೆ. ಇದು ನಮ್ಮ ದೇಶಿ ಸಂಸ್ಕೃತಿ, ಸಂಪ್ರದಾಯ, ಪರಂಪರೆ ಆಚರಣೆಯಿಂದ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ. ಇಂತಹ ಶ್ರೀಮಂತಿಕೆಯ ವೈವಿಧ್ಯತೆಯನ್ನು ಹೆಚ್ಚಿಸಲೇಂಬಂತೆ ಅನೇಕ ವಿದ್ವಾಂಸರು ಹಲವಾರು ರೀತಿಯಲ್ಲಿ ಜಾನಪದ ಸಾಹಿತ್ಯದ ಶ್ರೀಮಂತಿಕೆಯ ಕುರಿತು ವ್ಯಾಖ್ಯಾನಿಸಿದ್ದರೆ ಅದರಲ್ಲಿ ಪ್ರಮುಖವಾಗಿ ಹಾ.ಮಾ.ನಾಯಕರವರು "ಜಾನಪದ ಲಿಖಿತ ದಾಖಲೆಗಿಂತ ಜನತೆಯ ಗ್ರಂಥಸ್ಥವಲ್ಲದ ಸಾಂಪ್ರದಾಯಿಕ ಮೊತ್ತ. ಸಂಪ್ರದಾಯವನ್ನು ಕುರಿತಾದ ವಿಜ್ಞಾನ ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಯಾಗಿದೆ". ಜೀ.ಶಂ.ಪರಮಶಿವಯ್ಯನವರು ನಾಗರಿಕತೆಗೂ ಮೂಲವಾದ ಶಿಷ್ಟ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬೆಳವಣಿಗೆ ಪಡೆದ ಜನಸಮೂದಾಯದ ಜನಪದ ಸಾಹಿತ್ಯವು ಜೀವನ ಪ್ರೀತಿಯನ್ನು ಹೊಂದಿರುವ ಸಾಹಿತ್ಯವಾಗಿದೆ ಎಂದು ಜನಪದ ಸಾಹಿತ್ಯ ಶ್ರೀಮಂತಿಕೆಯನ್ನು ಕೊಂಡಾಡಿದ್ದಾರೆ.

ಒಟ್ಟಾರೆಯಾಗಿ ಕಿರಿದುದರಲಿ ಹಿರಿದರ್ಥ ನೀಡುವ ಜನಪದರ ಸಂಸ್ಕೃತಿಯು ಗ್ರಾಮೀಣ ಜನರ ಶ್ರೀಮಂತ ಬದುಕಿಗೆ ಆಧಾರವಾಗಿದೆ. ಪೀಳಿಗೆಯಿಂದ ಪೀಳಿಗೆಗೆ ಮೌಖಿಕ ಪರಂಪರೆಯ ಮೂಲಕ ತನ್ನ ವೈಶಿಷ್ಟ್ಯತೆಯನ್ನು ಮೈಗೂಡಿಸಿಕೊಂಡು ಇಂದಿನ ಮತ್ತು ಮುಂದಿನ ಭವಿಷ್ಯಕ್ಕೆ ಜೀವನ ಮೌಲ್ಯಗಳನ್ನು ಕಲಿಸುವ ಮತ್ತು ಬೆಳೆಸುವ ಈ ಸಾಹಿತ್ಯದ ಶ್ರೇಷ್ಠತೆ ಸದಾ ಸ್ವಾಗತಾರ್ಹವಾದದ್ದು. ಸಾಂಸ್ಕೃತಿಕ ಮೌಲ್ಯಗಳಾದ ಹಬ್ಬ ಹರಿದಿನ, ನಂಬಿಕೆ, ಆಚರಣೆ, ಸಂಸ್ಕೃತಿ ಸಂರಕ್ಷಣೆ ಮಾಡುವ ಹೊಣೆಗಾರಿಕೆ ಇಂದು ನಮ್ಮ ನವ ಸಮಾಜದ ಮೇಲಿದೆ. ಹಾಗೂ ನೈತಿಕ ಬೋಧನೆಗಳಾದ ಗಾದೆಗಳು, ತ್ರಿಪದಿಗಳು ಕಥೆಗಳು, ನೈತಿಕ ಪಾಠ – ಹಾಡುಗಳು,

ಇಂದಿನ ಬದುಕಿಗೆ ಮಾರ್ಗದರ್ಶಕವಾಗಿವೆ. ಇದು ಗ್ರಾಮೀಣ ಮನರಂಜನೆಯ ಭಾಗವು ಆಗಿದ್ದು, ಆಧುನಿಕ ಸಾಹಿತ್ಯಕ್ಕೆ ಜನಪದ ಸಾಹಿತ್ಯ ಬಹುದೊಡ್ಡ ಪ್ರೇರಣೆಗೆ ಸಾಕ್ಷಿಯಾಗಿದೆ. ಈ ರೀತಿ ಜನಪದ ಸಾಹಿತ್ಯವು ವಿಶಾಲ ಪರಂಪರೆಯನ್ನು ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೊಂದಿದೆ. ಹಳೆಬೇರು ಹೊಸ ಚಿಗುರು ಕೂಡಿದರೆ ಮರ ಸೊಗಸು ಎನ್ನುವ ಕರುಳ ಬಳ್ಳಿಯ ಸಂಬಂಧವನ್ನು ಇವತ್ತೀನ ಯುವಜನತೆಗೆ ಬೆಳಿಸುವ ಮೂಲಕ ಜನಪದ ಸಾಹಿತ್ಯದಲ್ಲಿನ ಸಂಕ್ಷಿಪ್ತ ಸ್ವರೂಪದ ಶ್ರೀಮಂತಿಕೆಯನ್ನು ಈ ಲೇಖನದಲ್ಲಿ ಕಾಣಬಹುದು.

**ಪರಾಮರ್ಶನ ಗ್ರಂಥಗಳು:**


1. ಹಲಸಂಗಿ ಗೆಳೆಯರು, (2017), ಗರತಿಯ ಹಾಡುಗಳು, ಕಾವ್ಯಶ್ರೀ ಪ್ರಕಾಶನ, ಬೆಂಗಳೂರು.
2. ಸೀತಾರಾಮಯ್ಯ ವಿ., (1978), ಜಾನಪದ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.
3. ನಾಯಕ ಹಾ.ಮಾ., (1967), ಹೊನ್ನ ಬಿತ್ತೇವು ಹೊಲಕೆಲ್ಲ, ಕರ್ನಾಟಕ ಜನಪದ ಅಕಾಡೆಮಿ, ಬೆಂಗಳೂರು.
4. ಪರಮಶಿವಯ್ಯ ಜಿ.ಶಂ., (2012), ಜನಪದ ಕೆಲವು ಮುಖಗಳು, ಸಾಗರ ಪ್ರಕಾಶನ, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.